(ಖ) ಪೂರಕ ಸಹಕಾರಿ ಸಂಚಾರ ನಿರ್ವಹಣೆ ಸಾಧನೆ ಆಗಲಿದೆ. ಸಂಚಾರ ಮತ್ತು ರಸ್ತೆ ಸುರಕ್ಷತೆ ಬಗ್ಗೆ ಅರಿವು ಹೆಚ್ಚಳಗೊಂಡು ತಿಳುವಳಿಕೆ ಮಟ್ಟ ಹೆಚ್ಚಲಿದೆ.

(ಎ) ಕೌಶಲ್ಯಪೂರ್ಣ ಸಂಚಾರ ಪೊಲೀಸ್ ಕರ್ತವ್ಯ ಹಾಗೂ ನಿಯಂತ್ರಣದಿಂದಾಗಿ ಗಮನಾರ್ಹ ಕಾರ್ಯಪಾಲನೆಗೆ ನಾಂದಿಯಾಗಲಿದೆ.

ನಮ್ಮ ಸಂದರ್ಭಕ್ಕೆ ಸರಿಹೊಂದುವಂತಹ ಅತ್ಯಾಧುನಿಕ ಸಂಚಾರ ನಿರ್ವಹಣಾ ತಂತ್ರಜ್ಞಾನ ಮತ್ತು ತಂತ್ರಗಾರಿಕೆಗಳನ್ನು ಅಳವಡಿಸಿಕೊಂಡು ಒತ್ತಡ, ಸುರಕ್ಷತೆ ಇತ್ಯಾದಿ ಸಂಚಾರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ "ಬಿ ಟ್ರಾಕ್ 2010" ಯೋಜನೆಯು ರಾಷ್ಟ್ರದಲ್ಲೇ ಪ್ರಪ್ರಥಮವಾಗಿರುತ್ತದೆ. ಬೆಂಗಳೂರು ನಗರದ ಸಂಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲೆ ಬೃಹತ್ ಮೂಲಭೂತ ಸೌಕರ್ಯಗಳ ಯೋಜನೆ ಮತ್ತು ಕಾರ್ಯಕಾರಿ ಕಾರ್ಯಕ್ರಮಗಳಿಗೆ ಇದು ಇಂಬು ನೀಡಲಿದೆ.

1931 (2375) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಬೇಹುಗಾರಿಕೆ ದಳದ ಬಲವರ್ಧನೆಗಾಗಿ ಸರ್ಕಾರದ ಯೋಜನೆಗಳೇನು;

ಆ) ಆಧುನಿಕ ತಂತ್ರಜ್ಞಾನದ ಉಪಕರಣಗಳ ಬಳಕೆ ಮತ್ತು ಸಮರ್ಪಕ ಸಿಬ್ಬಂದಿ ವರ್ಗದವರನ್ನು ಒದಗಿಸಿಕೊಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಆಧುನಿಕ ತಂತ್ರಜ್ಞಾನದ ತರಬೇತಿ ನೀಡಿ ಆ ಮೂಲಕ ಬೇಹುಗಾರಿಕೆ ದಳಕ್ಕೆ ಶಕ್ತಿ ನೀಡುವ ಕುರಿತು ಕ್ರಮ ಜರುಗಿಸಲಾಗುವುದೇ;

ಈ) ಬೇಹುಗಾರಿಕೆ ದಳವನ್ನು ಬಲಪಡಿಸುವ ಕುರಿತಾದ ಪ್ರಸ್ತಾವನೆಗಳನ್ನು ಪುರಸ್ಕರಿಸಲು ಸರ್ಕಾರ ಕೈಗೊಳ್ಳಲಿರುವ ಸಕಾಲಿಕ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯ ಬೇಹುಗಾರಿಕೆ ದಳದ ಬಲವರ್ಧನೆಗಾಗಿ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ: 226:ಪಿಒಪಿ:2005 ದಿನಾಂಕ : 22/07/2006 ರಲ್ಲಿ ಸಿಬ್ಬಂದಿಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

ಆ) ರಾಜ್ಯ ಬೇಹುಗಾರಿಕೆ ಇಲಾಖೆಯಲ್ಲಿರುವ ಸಿಬ್ಬಂದಿಗಳಿಗೆ ಆಧುನಿಕ ತಂತ್ರಜ್ಞಾನದ ಉಪಕರಣಗಳ ಬಳಕೆಯಲ್ಲಿ ಸೂಕ್ತ ತರಬೇತಿಯನ್ನು ಸತತವಾಗಿ ನುರಿತ ತಜ್ಞರಿಂದ ನೀಡಲಾಗಿದೆ. ಹಾಗೂ ಈ ಸಂಬಂಧ ಅನೇಕ ತರಬೇತಿ ಕಾರ್ಯಕ್ರಮಗಳನ್ನು ಇಲಾಖೆಯು ಇನ್ನು ಮುಂದೆಯೂ ಸಹ ನಡೆಸಲು ಉದ್ದೇಶಿಸಿರುತ್ತದೆ.

ಇ) ಆಧುನಿಕ ತಂತ್ರಜ್ಞಾನದ ತರಬೇತಿಯನ್ನು ಬೇಹುಗಾರಿಕೆ ದಳದ ಸಿಬ್ಬಂದಿಗಳಿಗೆ ನೀಡಿ, ಬೇಹುಗಾರಿಕೆ ದಳದ ಶಕ್ತಿ ಹೆಚ್ಚಿಸುವ ಬಗ್ಗೆ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.

ಈ) ಸರ್ಕಾರವು ಸಂಪೂರ್ಣ ಪ್ರಮಾಣದಲ್ಲಿ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

1932 (2461) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :- ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಕರಾವಳಿ ಜಿಲ್ಲೆಗಳ ನದಿ ನೀರಿನಲ್ಲಿ ಮಾನವ ಶ್ರಮದಿಂದ ದೋಣಿಯ ಮೂಲಕ ಚಿಪ್ಪುಗಳನ್ನು ಮತ್ತು ಮರಳನ್ನು ತೆಗೆಯುವ ಪಾರಂಪರಿಕ ವೃತ್ತಿ ನಿರತರಿಗೆ ನಿರ್ಬಂಧ ವಿಧಿಸಿರುವುದನ್ನು ಸಡಿಲಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

2) ಸಿ.ಆರ್.ಜೆಡ್ ವ್ಯಾಪ್ತಿಯೊಳಗೆ ಮರಳುಗಾರಿಕೆ ನಿಷೇಧದಿಂದ ಕೆಲವು ನದಿ ಪ್ರದೇಶದಲ್ಲಿ ಅತ್ಯಧಿಕ ಮಳೆ ಬೀಳುವುದರಿಂದ ಅಪಾರ ಪ್ರಮಾಣದ ಮರಳು ಕೊಚ್ಚಿ ಬಂದು ಕರಾವಳಿ ಪ್ರದೇಶದ ಭೂ-ಭಾಗಗಳಲ್ಲಿ ಮರಳುದಿಣ್ಣೆಗಳಾಗುವ ಮೂಲಕ ನದಿ ನೀರು ಸಮುದ್ರಕ್ಕೆ ಸೇರುವಲ್ಲಿನ ಅಡಚಣೆಗಳನ್ನು ಸರ್ಕಾರ ಗಮನಿಸಿದೆಯೇ;

3) ಹಾಗಿದ್ದಲ್ಲಿ ಆ ಕುರಿತು ಕೈಗೊಂಡ ಪರಿಹಾರ ಕ್ರಮಗಳೇನು;

4) ಕಡಲ ಕೊರೆತ್, ನದಿಪಾತ್ರ ಅಗಲವಾಗಿ ನೈಸರ್ಗಿಕ ಅನಾಹುತಗಳನ್ನು ತಪ್ಪಿಸಲು ನೆರವಾಗುವಂತೆ ಮಾನವ ಶ್ರಮದಿಂದ ದೋಣಿಗಳ ಮೂಲಕ ಮರಳುಗಾರಿಕೆ ಮಾಡುವ ಬಡ ಕಾರ್ಮಿಕ ವರ್ಗದವರಿಗೆ ಮರಳುಗಾರಿಕೆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಅನುಮತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ. ಚನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

1) ಇಲ್ಲ

2) ಇಲ್ಲ

3) ಉದ್ಭವಿಸುವುದಿಲ್ಲ